JULY 08, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**1. ರಾಜ್ಯದ – GTTC, Government Tool Room and Training Centre ನಲ್ಲಿ, ಹಲವಾರು ನೂತನ, ಕ್ರಿಯಾಶೀಲ ಯೋಜನೆಗಳನ್ನು ಜಾರಿಗೊಳಿಸಲಾಗಿದೆ; ಯುವಜನತೆಯ ಕೌಶಲ ಪೂರ್ಣತೆಗೆ ಸಹಕಾರಿಯಾಗಲಿದೆ ಎಂದು, ಕೌಶಲಾಭಿವೃದ್ಧಿ ಖಾತೆ ಸಚಿವ, ಶರಣ ಪ್ರಕಾಶ ಪಾಟೀಲ ಹೇಳಿದ್ದಾರೆ. ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ, ಜಿ.ಟಿ.ಟಿ.ಸಿ. ಹಿರಿಯ ವಿದ್ಯಾರ್ಥಿಗಳ ಜೊತೆ ಸಮಾಲೋಚನೆ ನಡೆಸಿ, ಮಾತನಾಡಿದರು. ಜಿ.ಟಿ.ಟಿ.ಸಿ.ಯಲ್ಲಿ ಜರ್ಮನ್ ಭಾ ಾ ಪ್ರಯೋಗಾಲಯ ಸ್ಥಾಪಿಸಲಾಗಿದ್ದು, ಕರ್ನಾಟಕ ಮತ್ತು ಜರ್ಮನಿಯ ನಡುವಿನ, ದ್ವಿಪಕ್ಷೀಯ ಸಹಕಾರವನ್ನು ಮತ್ತ ್ಟ ಬಲಪಡಿಸಲು, ರಾಜ್ಯ ಸರ್ಕಾರ ನಿರಂತರ ಪ್ರಯತ್ನ ಮಾಡುತ್ತಿದೆ ಎಂದು, ತಿಳಿಸಿದರು.**

<><><>

**2. ಹೃದಯಾಘಾತವನ್ನು, ಅಧಿಸೂಚಿತ ಕಾಯಿಲೆ ಎಂದು, ಘೋಷಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ್ ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಹೃದಯಾಘಾತಕ್ಕೆ ಒಳಗಾದವರ, ಮರಣೋತ್ತರ ಪರೀಕ್ಷೆ ಕಡ್ಡಾಯಗೊಳಿಸಲಾಗಿದೆ. ಹೃದಯಾಘಾತ ಹಾಗೂ ಮುನ್ನೆಚ್ಚರಿಕೆ, ಪ್ರಾಥಮಿಕ ಚಿಕಿತ್ಸೆ ಕುರಿತು, ಶಾಲಾ ಪಠ್ಯದಲ್ಲಿ ಅಳವಡಿಕೆ, 15 ವರ್ಷದ ಮಕ್ಕಳಿಗೆ, ಶಾಲೆಯಲ್ಲೇ ಹೃದಯ ಸೇರಿ, ಸಮಗ್ರ ಆರೋಗ್ಯ ತಪಾಸಣೆ, ರಾಜ್ಯದ ಎಲ್ಲ ತಾಲೂಕು ಆಸ್ಪತ್ರೆಗಳಿಗೆ, ಪುನೀತ ರಾಜಕುಮಾರ ಹೃದಯ ಜ್ಯೋತಿ ಯೋಜನೆ ವಿಸ್ತರಿಸಲು, ನಿರ್ಣಯಿಸಲಾಗಿದೆ ಎಂದರು.**

<><><>

**3. ರಾಜ್ಯಾದ್ಯಂತ ನ್ಯಾಯ ಬೆಲೆ ಅಂಗಡಿಗೆ, ಪಡಿತರ ಆಹಾರ ಧಾನ್ಯ ಸಾಗಣೆ ಬಾಕಿ, 260 ಕೋಟಿ ರೂಪಾಯಿ ಬಿಡುಗಡೆ ಸೇರಿದಂತೆ, ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಪಡಿತರ ಸಾಗಣೆ ಸ್ಥಗಿತ ಗೊಳಿಸಿ, ಇಂದಿನಿಂದ ಮುಷ್ಕರ ನಡೆಸಲು, ಲಾರಿ ಮಾಲೀಕರು ನಿರ್ಧರಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಷಣ್ಮುಗಪ್ಪ, ನಾಲ್ಕು ಸಾವಿರ ಪಡಿತರ ಸಾಗಣೆ ಲಾರಿಗಳು ಸ್ಥಗಿತಗೊಳ್ಳಲಿದ್ದು, ಪಡಿತರ ವಿತರಣೆಯಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇದೆ ಎಂದರು.**

<><><>

**4. ಸೇವೆ, ಸುಶಾಸನ ಹಾಗೂ ಬಡವರ ಕಲ್ಯಾಣ ಧ್ಯೇಯದೊಂದಿಗೆ, ಕೇಂದ್ರ ಸರ್ಕಾರದ 11 ವರ್ಷಗಳನ್ನು ಪೂರೈಸಿದ ಹಿನ್ನೆಲೆ ಹಾಗೂ ತುರ್ತು ಪರಿಸ್ಥಿತಿ ಘೋಷಣೆಯಾಗಿ, 50 ವರ್ಷಗಳು ಪೂರ್ಣಗೊಂಡ ಸಂದರ್ಭದಲ್ಲಿ, ಕರಾಳ ದಿನವನ್ನು ಸ್ಮರಿಸುವ ಉದ್ದೇಶದಿಂದ, ಅಂದು ಹೋರಾಟದಲ್ಲಿ ಭಾಗವಹಿಸಿ, ಜೈಲುವಾಸ ಅನುಭವಿಸಿದವರಿಗೆ, ಧಾರವಾಡದ ಕರ್ನಾಟಕ**

ವಿದ್ಯಾವರ್ಧಕ ಸಂಘದಲ್ಲಿ, ಸನ್ಮಾನ ಸಮಾರಂಭ ಜರುಗಿತು. ಪ್ರೌಢ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ, ಮಹಾಬಲೇಶ್ವರ ಸಿಂದಗಿ ಅವರು, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ಮಹಾಬಲೇಶ್ವರ ಸಿಂದಗಿ ಧ್ವನಿ 35 ಸೆಕೆಂದುಗಳು

<><><>

5. ಡಾಕ್ಟರ್ ಶ್ಯಾಮ ಪ್ರಸಾದ ಮುಖರ್ಜಿ ಅವರಂತಹ, ಮಹನೀಯರ ಜೀವನ ಸಾಧನೆಗಳ ಕುರಿತು, ಯುವ ಜನಾಂಗ ತಿಳಿಯಬೇಕು; ಸುದೃಢ ವ್ಯಕ್ತಿತ್ವ ನಿರ್ಮಾಣಕ್ಕೆ ಅಡಿಪಾಯವಾಗಲಿದೆ ಎಂದು, ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ಧಿ ಹೇಳಿದ್ದಾರೆ. ಧಾರವಾಡದ ವನಿತಾ ಸೇವಾ ಸಮಾಜದ ಸಭಾಂಗಣದಲ್ಲಿ, ಕೇಂದ್ರದ ಮೇರಾ ಯುವ ಭಾರತ, ನೆಹರು ಯುವ ಕೇಂದ್ರ ಹಾಗೂ ಸಂಸ್ಕಾರ ಭಾರತಿ ಸಹಯೋಗದಲ್ಲಿ, ಮುಖರ್ಜಿ ಅವರ, 125ನೇ ಜಯಂತಿ ನಿಮಿತ್ತ ಏರ್ಪಡಿಸಿದ್ದ, ಪ್ರಬಂಧ ಸ್ಪರ್ಧೆ ಹಾಗೂ ಗುರುಪೂರ್ಣಿಮೆ ಉತ್ಸವ ಉದ್ಘಾಟಿಸಿ, ಅವರು ಮಾತನಾಡಿದರು.

<><><>

6. ಗದುಗಿನ ಪಂಡಿತ ಪುಟ್ಟರಾಜ ಸೇವಾ ಸಮಿತಿ, 2024, 25 ಸಾಲಿನಲ್ಲಿ ಪ್ರಕಟವಾದ, ಕನ್ನಡ, ಹಿಂದಿ ಮತ್ತು ಸಂಸ್ಕೃತ ಭಾಷೆಯ, ಎಲ್ಲ ಪ್ರಕಾರದ ಕೃತಿಗಳನ್ನು, ಶ್ರೀ ಪುಟ್ಟರಾಜ ಸಾಹಿತ್ಯ ಪುರಸ್ಕಾರ ರಾಜ್ಯ ಪ್ರಶಸ್ತಿಗೆ ಆಹ್ವಾನಿಸಿದೆ. ಪ್ರಶಸ್ತಿ 5 ಸಾವಿರ ರೂಪಾಯಿ ನಗದು, ಸ್ಮರಣಿಕೆ ಹಾಗೂ ಪ್ರಶಸ್ತಿಪತ್ರವನ್ನು ಒಳಗೊಂಡಿದೆ. ದಾಂಡೇಲಿಯಲ್ಲಿ ಆಯೋಜಿತ, ಪುಟ್ಟರಾಜ ಪುಣ್ಯ ಸ್ಮರಣೋತ್ಸವದಲ್ಲಿ ಈ ಪ್ರಶಸ್ತಿಯನ್ನು, ಪ್ರದಾನ ಮಾಡಲಾಗುತ್ತಿದೆ. ವಿವಿಧ ಪ್ರಕಾರ, ಆಯ್ದ 10 ಮೌಲಿಕ ಕೃತಿಗಳನ್ನು ಗುರುತಿಸಿ, ವರ್ಷದ ಶ್ರೇಷ್ಠ ಕೃತಿ ರತ್ನ ಸಮ್ಮಾನ್ ನೀಡಿ ಗೌರವಿಸಲಾಗುವುದು ಎಂದು, ಪ್ರಕಟಣೆ ತಿಳಿಸಿದೆ.

<><><>

7. ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲೂಕು, ಕೈವಾರದ ಯೋಗಿ ನಾರೇಯಣ ಮಠದಲ್ಲಿ, ಗುರುಪೂರ್ಣಿಮೆ ಅಂಗವಾಗಿ, ಇಂದಿನಿಂದ 72 ಗಂಟೆಗಳ ಕಾಲ, ನಿರಂತರ ಸಂಗೀತೋತ್ಸವ ಹಾಗೂ ಗುರು ಪೂಜಾ ಮಹೋತ್ಸವ ಆಯೋಜಿತವಾಗಿದೆ.

<><><>

8. ಪ್ರಾಣಿಗಳಿಂದ ಮನು 'ಷ್ಯರಿಗೆ ಹರಡಬಹುದಾದ ಸೋಂಕುಗಳ ಬಗ್ಗೆ ಎಚ್ಚರ ಹಾಗೂ ಜಾಗೃತಿ ಮೂಡಿಸಲು, ಪ್ರತಿ ವರ್ಷ ಜುಲೈ 6 ರಂದು, ವಿಶ್ವ ಝೂನೋಸಸ್ ದಿನವನ್ನು ಆಚರಿಸಲಾಗುತ್ತಿದೆ ಎಂದು, ಶಿವಮೊಗ್ಗ ಜಿಲ್ಲಾ ಆರೋಗ್ಯಾಧಿಕಾರಿ ನಟರಾಜ್ ತಿಳಿಸಿದ್ದಾರೆ.

<><><>

09. ವಿಶ್ವ ಝೋನೋಸಿಸ್ ದಿನಾಚರಣೆ ಅಂಗವಾಗಿ, ಬೆಂಗಳೂರು ನಗರ ವ್ಯಾಪ್ತಿಯಲ್ಲಿ, ರೇಬಿಸ್ ಜಾಗೃತಿ ಜಾಥಾಕ್ಕೆ, ಬಿ.ಬಿ.ಎಂ.ಪಿ. ವಿಶೇಷ ಆಯುಕ್ತ, ವಿಕಾಸ ಸುರಳ್ಕರ್ ಚಾಲನೆ ನೀಡಿದರು.

<><><>

10. ರಾಯಚೂರು ಮಹಾನಗರ ವ್ಯಾಪ್ತಿಯಲ್ಲಿ, 24 ಲಕ್ಷ 75 ಸಾವಿರ ರೂಪಾಯಿ ವೆಚ್ಚದಲ್ಲಿ, ಬೀದಿ ನಾಯಿಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆ ನಡೆಸಲಾಗುವುದು ಎಂದು, ಪಾಲಿಕೆ ಆಯುಕ್ತ ಜುಬಿನ್ ಮೊಹಪಾತ್ರ ತಿಳಿಸಿದ್ದಾರೆ.

<><><>

11. ವೈದ್ಯಕೀಯ ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಖಾತೆ ಸಚಿವ ಶರಣ ಪ್ರಕಾಶ ಪಾಟೀಲ, ಇಂದು ಮತ್ತು ನಾಳೆ ಕಲಬುರಗಿ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ಅವರು ಚಾಲನೆ ನೀಡಲಿದ್ದಾರೆ.

<><><>

**12. ಹಾವೇರಿ ಜಿಲ್ಲೆ, ಹಾನಗಲ್ ತಾಲೂಕಿನ, 15 ಸರ್ಕಾರಿ ಶಾಲೆಗಳಲ್ಲಿ, ಕನ್ನಡ ಮಾಧ್ಯಮದೊಂದಿಗೆ, ಆಂಗ್ಲ ಮಾಧ್ಯಮ ತರಗತಿ ಆರಂಭಿಸಲು, ಸರ್ಕಾರದ ಅನುಮತಿ ದೊರೆತಿದೆ ಎಂದು, ಶಾಸಕ ಶ್ರೀನಿವಾಸ ಮಾನೆ ತಿಳಿಸಿದ್ದಾರೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**